# ಬಾವಲಿ

## ನಿಶಾಚರಿಗಳ ಕಾಲೊನಿಯಲ್ಲಿ...

ನಮ್ಮ ಪರಿಸರ ಚಕ್ರದಲ್ಲಿ ಬಹುಮುಖ್ಯ ಪಾತ್ರ ವಹಿಸಿರುವ ಬಾವಲಿಗಳು, ಪರಿಸರಪ್ರಿಯರ ಕುತೂಹಲದ ಕೇಂದ್ರವೂ ಹೌದು. ಭಿನ್ನ ದೇಹರಚನೆ, ಸ್ವಭಾವದಿಂದ ಗಮನ ಸೆಳೆಯುವ ನೂರಾರು ಪ್ರಭೇದದ ಬಾವಲಿಗಳು ಜಗತ್ತಿನಲ್ಲಿವೆ. ಅಂಥ ಬಾವಲಿಗಳ ಲೋಕದೊಳಗೊಂದು ಸುತ್ತು.



ತಮ್ಮ ಅಗಲವಾದ ರೆಕ್ಕೆಗಳನ್ನು ದೇಹದ ಸುತ್ತ ಸುತ್ತಿಕೊಳ್ಳುವ ಮೂಲಕ ಬಾವಲಿಗಳು ತಮ್ಮನ್ನು ತಾವು ಬೆಚ್ಚಗಿಟ್ಟುಕೊಂಡು ಚಳಿಯಿಂದ ರಕ್ಷಿಸಿಕೊಳ್ಳುತ್ತವೆ.

ನಿರಂತರವಾಗಿ, ಅವಿಶ್ರಾಂತ ಹಾರಾಟ ನಡೆಸಬಲ್ಲ ಏಕೈಕ ಸ್ತನಿ ಬಾವಲಿ. 'ಕೈರಾಪ್ಟರಾ' ಗಣಕ್ಕೆ ಸೇರಿದ ಬಾವಲಿಯಲ್ಲಿ ವಿಶ್ವದಾದ್ಯಂತ 1017 ಪ್ರಭೇದಗಳಿರುವುದಾಗಿ ಅಂದಾಜಿಸಲಾಗಿದೆ. ಭಾರತದಲ್ಲಿ ಬಾವಲಿ ಪ್ರಭೇದಗಳ ಸಂಖ್ಯೆ 126.



ಬಾವಲಿಗಳು ಪರಾಗಸ್ಪರ್ಶದಲ್ಲಿ ಬಹುಮುಖ್ಯಪಾತ್ರ ವಹಿಸುತ್ತವೆ. ಬಾವಲಿಗಳ ಮುಖಾಂತರ ನಡೆಯುವ ಪರಾಗಸ್ಪರ್ಶವನ್ನು 'ಕಿರೊಪ್ಟೆರೊಫಿಲಿ' ಎಂದು ಕರೆಯಲಾಗುತ್ತದೆ. ಕೆಲವು ಬಾವಲಿಗಳ ಅಂಗಗಳು ಹೂವುಗಳ ಮಕರಂದ ಹೀರಲು ಅನುಕೂಲವಾಗುವಂತೆ ವಿಕಸನಗೊಂಡಿವೆ.



ಇಂಡಿಯನ್ ಫ್ಲೈಯಿಂಗ್ ಫಾಕ್ಸ್ ಹಾಗೂ ಗಿಡ್ಡ ಮೂಗಿನ ಬಾವಲಿ ಮನುಷ್ಯನ ನೆಲೆಗಳ ಸಮೀಪ ಬದುಕಬಲ್ಲವು. ಈ ಎರಡೂ ಪ್ರಭೇದಗಳು ಹಣ್ಣುಗಳನ್ನು ತಿಂದು ಜೀವಿಸುತ್ತವೆ. ಹೀಗಾಗಿ ಹಣ್ಣುಗಳ ಮರಗಳಿರುವ ಕಡೆ ಸಂಜೆ ಐದಾಗುತ್ತಿದ್ದಂತೆ ಈ ಬಾವಲಿಗಳು ಒಂದೆಡೆ ಸೇರುತ್ತವೆ.



ಅಂಟಾರ್ಟಿಕಾ ಹೊರತುಪಡಿಸಿ ವಿಶ್ವದ ಎಲ್ಲ ಕಡೆ ಬಾವಲಿಗಳು ವಾಸಿಸುತ್ತಿವೆ. ನಿರ್ದಿಷ್ಟ ಹಾಗೂ ಉತ್ತಮ ಹವಾಗುಣದಲ್ಲಿ ಮಾತ್ರ ಅವು ಬದುಕಬಲ್ಲವು. ಮರುಭೂಮಿ ಹಾಗೂ ತೀವ್ರ ಶೀತ ಪ್ರದೇಶಗಳಲ್ಲಿ ಅವು ಬದುಕಲು ಸಾಧ್ಯವಿಲ್ಲ. ಹೀಗಾಗಿ ಅಂಟಾರ್ಟಿಕಾದಲ್ಲಿ ಬಾವಲಿಗಳಿಲ್ಲ.



'ಜೈಂಟ್ ಗೋಲ್ಡನ್ ಕ್ರೋನ್ಡ್ ಫ್ಲೈಯಿಂಗ್ ಫಾಕ್ಸ್' ಅತಿ ದೊಡ್ಡ ಬಾವಲಿ ಎಂದು ಕರೆಸಿಕೊಂಡಿದೆ. ಇವುಗಳ ರೆಕ್ಕೆಗಳು ಆರು ಅಡಿಯವರೆಗೂ ಬೆಳೆಯಬಲ್ಲವು.

ಚಿಕ್ಕ ಆಕಾರದ ಬಾವಲಿ, ಪ್ರತಿ ರಾತ್ರಿ ತನ್ನ ದೇಹ ತೂಕದ ಅರ್ಧದಷ್ಟು ಕೀಟಗಳನ್ನು ತಿನ್ನುತ್ತದೆ. ಗರ್ಭ ಧರಿಸಿದ ಬಾವಲಿ, ತನ್ನ ದೇಹ ತೂಕದಷ್ಟು ಕೀಟಗಳನ್ನು ತಿನ್ನಬಲ್ಲದು. ಗಂಟೆಗೆ 1200 ಕೀಟಗಳನ್ನು ತಿನ್ನುವ ಸಾಮರ್ಥ್ಯ ಬಾವಲಿಗಳಿಗಿದೆ.